ಕೌತುಕವೆಂಬಂತೆ ಕಣ್ತುಂಬಿಕೊಳ್ಳುತ್ತಿದ್ದ, ಪ್ರಾಯದ ಹುಮ್ಮಸ್ಸು ತುಂಬಿ ತುಳುಕುತ್ತಿದ್ದ ಯುವಕ ಚಾಷ್ವೆ ಮಾತಾಡಿದ್ದ.

'ನಿಧಾನ ಕಣೇ, ಬಿದ್ದು ಗಿದ್ದು ಹಲ್ಲು ಮುರ್ಕಂಡೀಯಾ. ಒಂದ್ಸಲ ಕಟ್ಕೊಂಡ್ಮೇಲೆ ಬಿಡೋ ಹಾಗೂ ಇಲ್ಲ..'

ಫೋನ್ ಎತ್ತಿಕೊಂಡಿದ್ದಳು ನಾಗಶ್ರೀ. ಅಪ್ಪ, ಮಗಳ ಸಲ್ಲಾಪದ ನಡುವೆ ತಾನು ಇರಬಾರದೆಂಬ ಭಾವನೆಯಿಂದ ಒಳಗೆ ಹೋಗಿದ್ದ ರಾಮಚಂದ್ರ. ಹತ್ತು ನಿಮಿಷಗಳ ನಂತರ ಹೊರಗೆ ಬಂದರೆ ಕಣ್ಣೀರಿಡುತ್ತಾ ಕುರ್ಚಿಯ ಮೇಲೆ ಕುಳಿತಿದ್ದಾಳೆ ನಾಗಶ್ರೀ. ತನ್ನನ್ನು ಒಲಿದು ಬಂದವಳ ಕಣ್ಣಲ್ಲಿ ಹನಿ ನೀರು ಹಾಕಿಸಗೊಡಬಾರದೆಂದು ಅಂದುಕೊಂಡಿದ್ದ ರಾಮಚಂದ್ರನಿಗೆ ಕುಟುಕಿದಂತಾಗಿತ್ತು. ಹುಡುಗಿಗೆ ಮತ್ತೆ ತೌರಿನ ನೆನಪು ಕೆದಕಿದಂತಾಯ್ತಾ? ಅಂಗೈ ಮಲ್ಲಿಗೆಯಂತೆ ನೋಡಿಕೊಳ್ಳುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರೂ ಯಾಕೆ ಈ ದುಃಖ?

'ಏನಾಯ್ತೇ? ಎಲ್ಲಾ ಹುಷಾರಿದ್ದಾರೆ ತಾನೇ?'

ಹೂಂ ಅನ್ನದೆ, ಉಹುಂ ಅನ್ನದೆ ನಾಗಶ್ರೀ ಅವನಿಗೆ ತೆಕ್ಕೆ ಬಿದ್ದಿದ್ದಳು. ಯಾವ ಹೊತ್ತಿಗೆ ಯಾರೂ ಬರಬಹುದಾದ ಮುಂಚೀ ಕಡೆಯಂತಾ ಸಾರ್ವಜನಿಕ ಸ್ಥಳದಲ್ಲಿ ಈ ಪರಿಯ ನಡವಳಿಕೆ ಅನುಚಿತವೆಂದು ಗ್ರಹಿಸಿ ಅವಳ ಹೆಗಲು ಬಳಸಿ ತನ್ನ ಕೋಣೆಗೆ ಕರೆದೊಯ್ದು ಬಾಗಿಲು ಮುಂದೆ ಮಾಡಿದ್ದ ರಾಮಚಂದ್ರ. ಅಳುವಿನ ಉಬ್ಬರ ಕೊಂಚ ಇಳಿದ ಮೇಲೆ ನಾಗಶ್ರೀ ಬಾಯ್ಬಿಟ್ಟಿದ್ದಳು.

'ನಿನ್ನೆ ರಾತ್ರಿ ಅವಳ ಅಮ್ಮ ಮತ್ತೊಮ್ಮೆ ಎಚ್ಚರದಪ್ಪಿದರಂತೆ'. ಸಕ್ಷೇಮವಾಗಿ ಊರು ತಲುಪಿದ್ದನ್ನು ಚುಟುಕಾಗಿ ಹೇಳಿದ್ದ ಅಪ್ಪ ನಿನ್ನೆಯ ದಿನ ಈ ವಿಷಯವನ್ನು ಅವಳಿಂದ ಮರೆ ಮಾಚಿದರಂತೆ. ಅರ್ಥ ಮಾಡಿಕೊಳ್ಳಬಲ್ಲ ರಾಮಚಂದ್ರ. ಮಗಳ ಮೊದಲ ರಾತ್ರಿಯ ಸೊಗದ ಗಳಿಗೆಗಳು ಕಹಿಯಾಗಬಾರದೆಂದು ಅಪ್ಪನಾದವನು ಹಾರೈಸಿದರೆ ಅದರಲ್ಲಿ ತಪ್ಪೇನಿಲ್ಲ. ಆದರೆ ಎರಡನೆಯ ರಾತ್ರಿಯ ಕುರಿತು ಈ ಎಚ್ಚರ ಅಥವಾ ಹಾರೈಕೆ ಯಾಕೆ ಕಾಡಲಿಲ್ಲ? ಈ ವಿಷಯವನ್ನು ಮುದ್ದಿನ ಮಗಳಿಂದ ಮುಚ್ಚಿಡಲಾಗದಷ್ಟು ಪರಿಸ್ಥಿತಿ ಹದಗೆಟ್ಟಿದೆಯೇ? ಬಣ್ಣಗೆಟ್ಟಿತ್ತು ರಾಮಚಂದ್ರನ ಮುಖ. ಅಮಲೇರಿಸುವ ಸುಧೆಯ ಮೊದಲ ಗುಟುಕು ಹೀರಿ, ಇನ್ನಷ್ಟು, ಮತ್ತಷ್ಟು ಉತ್ಕಂಠತೆಯಿಂದ ಎರಡನೆಯ ಗುಟುಕನ್ನು ಆಸ್ವಾದಿಸಬೇಕೆಂಬ ತಹತಹಿಕೆಯಲ್ಲಿ ಇನ್ನೂ ಮುಳುಗದ ಸೂರ್ಯನ ಕಡೆ ಅವನು ಅಸಹನೆಯ ನೋಟ ಬೀರಿ ಚಡಪಡಿಸುತ್ತಿದ್ದರೆ ಪರಿಸ್ಥಿತಿ ಮತ್ತೊಂದು ಮಗ್ಗುಲಿಗೆ ಹೊರಳಿಕೊಂಡಿದೆ. ಹೆಂಡತಿಯನ್ನು ಎದೆಗಪ್ಪಿಕೊಂಡು ಸಂತೈಸಿದ್ದ ರಾಮಚಂದ್ರ.

'ಮೊದ್ಲೂ ನಿಮ್ಮಮ್ಮಂಗೆ ಹೀಗೇನಾದ್ರೂ ಆಗ್ತಿತ್ತನೇ?' ಕೇಳಿದ್ದ. ಗಲಗಲ ತಲೆ ಅಲುಗಿಸಿದ್ದಳು ನಾಗಶ್ರೀ. ಕಣ್ಣ ಹನಿಗಳು ಅತ್ತಿತ್ತ ಚದುರಿ ಬಿದ್ದಿದ್ದುವು.

'ಮತ್ತೆ?'

'ನಂಗೇನು ಗೊತ್ತುಂಟು?' ಎನ್ನುವಂತೆ ಕೆಳದುಟಿ ಮುಂದೆ ಮಾಡಿದವಳು ಕೊಂಚ ಚೇತರಿಸಿಕೊಂಡ ನಂತರ ಹೇಳಿದ್ದಳು,

'ಅಮ್ಮ ನನ್ನನ್ನ ಇಷ್ಟ್ರಮಟ್ಟಿಗೆ ಹಚ್ಕೊಂಡಿದ್ಲು ಅಂತ ಗೊತ್ತೇ ಇರ್ಲಿಲ್ಲ. ನನ್ನ ಬಿಟ್ಟಿರಲಾಗದ ಸಂಕಟಕ್ಕೆ ಅವಳು ಒದ್ದಂತಿದಾಳೆ..'

'ಗೊತ್ತಾ ನಿಮ್ಗೆ? ಅಮ್ಮಂಗೆ ನಾಕು ಸಲ ಮೈ ಇಳಿದು ನಂತರ ನಾನು ಹುಟ್ಟಿದ್ದಂತೆ. ಮದುವೆಯಾಗಿ ಹತ್ತು ವರ್ಷ ಆಗ್ಹೋಗಿತ್ತಂತೆ. ನನ್ನನ್ನ ಹೇಗೆ ಕಾಪಾಡ್ಕಂಡಿದಾಳೆ ಅಂತ ಅವಳಿಗೆ ಗೊತ್ತಿದೆ..'

'ಪಾಪ, ಕಷ್ಟ ಆಗುತ್ತೆ ಅವ್ರಿಗೆ..' ರಾಮಚಂದ್ರ ಉಸುರಿದ್ದ.

## ಕೊನೆ

ಹೊನ್ನುಮಣ್ಣು
ಸಾಕು ಸಾಕಷ್ಟು
ಕೊಂಡರು
ಒಯ್ಯಲಾಗದಂತೆ
ಇಲ್ಲಿಯೇ ಬಿಟ್ಟು
ಹೋದರು.

★ ಪತ್ತಂಗಿ ಎಸ್. ಮುರಳಿ



ಈಶ್ವರ

'ಒಂದು ಮಾತು ಕೇಳ್ಲಾ? ಬೇಜಾರು ಮಾಡ್ಕಂಬಾರ್ದು ನೀವು..'

'ಹೇಳು..'

'ನಾಳೆ ಬೆಳಗಿನ ಬಸ್ಸಿಗೆ ನಮ್ಮೂರಿಗೆ ಹೋಗಿ ನಾಕು ದಿನ ಇದ್ದು ಬರೋಣನ್ರೀ? ಅಮ್ಮಂಗೆ ಸ್ವಲ್ಪ ಸಮಾಧಾನ ಆಗುತ್ತೆ'.

'ನಾಳೇನಾ?'

'ಸಾಧ್ಯ ಆಗಿದ್ರೆ ಈಗ್ಲೇ ಹೊರಟು ಬಿಡೋಣ ಅಂತಿದ್ದೆ. ನನ್ನ ಜೀವ ಪೂರಾ ಅಲ್ಲೇ ಇದೆ. ಪಾಪ, ಅಮ್ಮ..'

* * *

'ಶುರೂನಲ್ಲಿ ಹೀಗೆ ಹೋಗಿ ಬಂದು ಮಾಡ್ತಿದ್ರೆ ನನ್ನ ಬಿಟ್ಟಿರೋದು ಅಮ್ಮಂಗೆ ನಿಧಾನಕ್ಕೆ ಅಭ್ಯಾಸ ಆಗುತ್ತೆ..'

ಹೂಂಗುಟ್ಟಿದ್ದ ರಾಮಚಂದ್ರ. ಮಡದಿಯ ಕಪೋಲಗಳ ಮೇಲೆ ಹರಿದಿದ್ದ ಕಣ್ಣೀರ ಕಲೆಗಳನ್ನು ತೋರುಬೆರಳಿಂದ ವರೆಸಿದ್ದ. ನಾಗಶ್ರೀ ಗಿಣಿಯಂತೆ ಕೇಳಿದ್ದಳು.

'ಇದೆಂತಾ ರಗಳೆ ಗಂಟು ಬಿತ್ತು ಅಂತ ಬೇಜಾರಾಗುತ್ತಾ ನಿಮ್ಗೆ?'

'ಥೋ, ಹಂಗೆಂತಕ್ಕೆ ಯೋಚ್ನೆ ಮಾಡ್ತಿ ನೀನು? ನಿನ್ನ ಅಪ್ಪ, ಅಮ್ಮ ಅಂದ್ಮೇಲೆ ನನ್ನ ಅಪ್ಪ, ಅಮ್ಮನ ಥರಾನೇ..'

ಹೃದಯಾಂತರಾಳದಿಂದ ಹೇಳಿದ್ದಾ ಈ ಮಾತು? ಅಥವಾ ಹೊಸ ಬಿಸಿಯ ಉನ್ಮಾದದಲ್ಲಿ ಮಡದಿಗೆ ಪ್ರಿಯವಾಗಿದ್ದೆಲ್ಲವೂ, ಎಲ್ಲರೂ, ತನಗೂ ಪ್ರಿಯ ಎಂದು ಬಿಂಬಿಸುವ ಭ್ರಮಾಧೀನ ಸ್ಥಿತಿಯೇ?

ಇಲ್ಲ, ಇವತ್ತು ರಾತ್ರಿ ಶಿವರಾತ್ರಿ ಜಾಗರಣೆ. ಹಳೆಯ ನೆನಪುಗಳನ್ನೆಲ್ಲಾ ಮನಸ್ಸಿಂದ ಕೊಡವಿ ಹೊಸ ಬದುಕು ಕಟ್ಟಿಕೊಂಡಿದ್ದೇನೆಂದು ನಂಬಿಸಿಕೊಂಡಿದ್ದು ಶುದ್ಧ ಸುಳ್ಳು. ರೆಕ್ಕೆ ಬಂದ ಇರುವೆಗಳು ನೆಲ ಕೊರೆದು ತುಪತುಪನೆ ಮೇಲಕ್ಕೆ ಬಂದು ಹಾರಾಡುವಂತೆ ನೆನಪುಗಳು ತಾ ಮುಂದು, ನಾ ಮುಂದು ಎಂದು ಅಂತರಾಳದಿಂದ ಮೇಲಕ್ಕೆ ಎದ್ದೆದ್ದು ಬರುತ್ತಿವೆ. ರಾಮಚಂದ್ರ ಉಸ್ ಎಂದು ನಿಟ್ಟುಸಿರುಗರೆದ. ಹೊದ್ದ ಶಾಲನ್ನು ಕಿತ್ತು ಬಿಸಾಕಿ ಎದ್ದು ಕೂತ. ಹೇಗೂ ನಿದ್ದೆ ಬರುವುದಿಲ್ಲ ಅಂದ ಮೇಲೆ ಅಂಗಳದಲ್ಲಿ ಒಂದಷ್ಟು ಹೊತ್ತು ಅಡ್ಡಾಡಿಕೊಂಡು ಬಂದರೆ ಹಿತವೆನಿಸೀತು. ನಡುರಾತ್ರಿಯಲ್ಲಿ ಬಾಗಿಲು ತೆಗೆದುಕೊಂಡು ಹೊರ ಹೋಗಲು ಕಳ್ಳಕಾಕರ ಭಯವೇನಿಲ್ಲ.

ರಾಮಚಂದ್ರ ಹೆಗಲ ಮೇಲೊಂದು ಟವೆಲು ಎಸೆದುಕೊಂಡು ಅಂಗಳಕ್ಕಿಳಿದ. ಅಡಿಕೆ ಕೊಯ್ಲು ಮುಗಿದಿದ್ದರೂ ಇನ್ನೂ ಚಪ್ಪರ ಹಿರಿದಿಲ್ಲ. ಈ ಮನೆಯಲ್ಲಿ ಹಪ್ಪಳ, ಸಂಡಿಗೆ ಮಾಡುವ ಹೆಣ್ಣು ಕೈಗಳಿಲ್ಲ. ಹಾಗಾಗಿ ಯಾವಾಗ ಬೇಕಾದರೂ ಚಪ್ಪರ ಹಿರಿದು ಅಡಿಕೆ ದಬ್ಬೆಗಳನ್ನು ಕುಂಬಾಗದ ಹಾಗೆ ನೆಲಮಟ್ಟದಿಂದ ಕೊಂಚ ಮೇಲಕ್ಕೆ ಕೂಡಿಡುವ ಲಾಗಾಯ್ತಿನ ವ್ಯವಸ್ಥೆ ಮಾಡಿಸಬಹುದು. ಏನೋ ಉದಾಸೀನ. ಯಾವ ಕೆಲಸವಾದರೂ ಸರಿ, ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸಿ ಬಿಡಬೇಕು ಎನ್ನುವ ಗಡಿಬಿಡಿ ಇಲ್ಲ. ಎರಡು ದಿನ ಹೆಚ್ಚುಕಮ್ಮಿ ಆದರೆ ತಲೆ ಹೋಗುವಂತಾದ್ದೇನಿಲ್ಲ. ತಾವು ಅಣ್ಣತಮ್ಮಂದಿರು ಸಣ್ಣಕ್ಕಿದ್ದಾಗಿನ ಕಾಲದಲ್ಲಿ ಅಮ್ಮ ಬೇಸಿಗೆಯ ಬಿಸಿಲು ದಂಡ ಆಗಲು ಬಿಡುತ್ತಿದ್ದಳಾ? ಹಲಸಿನಕಾಯಿ ಹಪ್ಪಳ, ಬಾಳೇಕಾಯಿ ಹಪ್ಪಳ, ಸೀಮೆ ಅಕ್ಕಿ ಸಂಡಿಗೆ, ಕುಂಬಳಕಾಯಿ ಸಂಡಿಗೆ, ಹುಳಿಮಜ್ಜಿಗೆಗೆ ಉಪ್ಪು, ಇಂಗು ಹಾಕಿ ಅದರಲ್ಲಿ ನೆನೆಸಿ ಒಣಗಿಸುವ ಸಂಡಿಗೆ ಮೆಣಸಿನಕಾಯಿ, ಯಾವತ್ತೂ ಇಲ್ಲದೆ ಉಪ್ಪುಪ್ಪಿನ ರುಚಿ ಮುಂದಾಗಿರುತ್ತಿದ್ದ ಸಂಡಿಗೆ ಮೆಣಸನ್ನು ನೆನೆದು ನಾಲಿಗೆಯಲ್ಲಿ ನೀರೊಡೆಯಿತು. ಅಮ್ಮ, ಮಕ್ಕಳಿಗೆ ಇದೇ ಉದ್ಯೋಗ ಆಯ್ತಲ್ಲ ಎನ್ನುತ್ತಲೇ ತೋಟದಿಂದ ದೊಡ್ಡ ದೊಡ್ಡ ಬಾಳೆ ಹೆಡಲುಗಳನ್ನು ತಂದುಕೊಡುತ್ತಿದ್ದ ಅಪ್ಪ. ಇಡೀ ಬಾಳೆ ಹೆಡಲುಗಳನ್ನು ಮನೆಯೊಳಗೆ ತೆಗೆದುಕೊಂಡು ಹೋಗಬಾರದಂತೆ. ವಾಮೆ.. ಅನ್ನುತ್ತಿದ್ದಳು ಅಮ್ಮ. ಅಂದರೆ ಅಪಶಕುನ. ಯಾವ ಅಪಶಕುನಕ್ಕೂ ಎಡೆಗೊಡದಂತೆ ಅಮ್ಮನ ಕಣ್ಗಾವಲಿನಲ್ಲಿ ವಿನೀತರಾಗಿ ನಡೆದುಕೊಂಡರೂ ಒಳ್ಳೇದಾಗಿದ್ದೆಂತದು?

ಅಂಗಳ ಇಳಿದ ರಾಮಚಂದ್ರ ಸೀದಾ ಆ ತುದಿಯ ಹಲಸಿನಮರದ ಹತ್ತಿರ ಹೋಗಿ ನಿಂತ. ಉದ್ದೇಶಪೂರ್ವಕವೇನಲ್ಲ. ಒಂದು ಅಪ್ರಜ್ಞಾಪೂರ್ವಕ ಕ್ರಿಯೆ. ಹೊಟ್ಟೆಯೊಳಗೆ ಹೊರಳಾಡಿತು ಸಂಕಟದ ಅಲೆ. ಹಲಸಿನಕಾಯಿ ಹಪ್ಪಳ ಅಂದರೆ ಹಿಂದೊಂದು ಕಾಲದಲ್ಲಿ ಮೂಗು ಕುಯ್ಯಿಸಿಕೊಳ್ಳುವಷ್ಟು ಪ್ರಾಣ. ಗಾಳಿ, ಮಳೆಯಲ್ಲಿ ಉಡುರು ಹತ್ತಿಸಿಕೊಂಡು ಇಸ್ಕೂಲಿನಿಂದ ಬಂದವರಿಗೆ